1	2	3	4	5	6
22.	ಡಿ.ಎಸ್. ಅಬ್ದುಲ್ ರಹಮಾನ್	427	5-10-01	1-30	- ಅದೇ -
23.	ಹೆಚ್.ಜಿ. ಸುಧಾಕರ	439	17-11-02	1-00	ಬೆದರಗೋಡು
		448			
ಶಿವಮೊಗ್ಗ ಜಿಲ್ಲೆ, ತೀರ್ಥಹಳ್ಳಿ ತಾ.			ಸಾಮಾನ್ಯ ಮರಳು :-		
1.	ಎಂ.ಆರ್. ಜಯಂತ್	298	28-6-99	6-00	ಮಹಿಷಿ
2.	ಎಂ.ಸಿ. ನಾಗೇಶ್	299	28-6-99	4-00	ಮಹಿಷಿ
3.	ಎಂ.ಸಿ. ದಿನೇಶ್	308	16-9-99	1-20	ಲಿಂಗಾಪುರ
4.	ಹೆಚ್.ಆರ್. ಪ್ರಕಾಶ್ (ನವೀಕರಣ)	312	4-10-00	4-00	ಲಿಂಗಾಪುರ
5.	ಎಂ.ಸಿ. ದಿನೇಶ್	319	3-11-99	1-00	ಲಿಂಗಾಪುರ
6.	- ಅದೇ -	320	- ಅದೇ -	1-00	ಲಿಂಗಾಪುರ

ಪಶು ಚಿಕಿತ್ಸಾ ಆಸ್ಪತ್ರೆಯ ಸೇವಾ ಶುಲ್ಕ ಕುರಿತು

4161 (4593) : ಶ್ರೀ ಚೌಡರೆಡ್ಡಿ (ಚಿಂತಾಮಣಿ) ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಪಶುಚಿಕಿತ್ಸಾ ಆಸ್ಪತ್ರೆಗೆ ಚಿಕಿತ್ಸೆಗಾಗಿ ಬರತಕ್ಕಂತಹ ಸಣ್ಣ ಮತ್ತು ದೊಡ್ಡ ಪ್ರಾಣಿಗಳಿಗೆ ಎಷ್ಟು ಸೇವಾ ಶುಲ್ಕ ನಿಗದಿಪಡಿಸಲಾಗಿದೆ:

ಆ) ಪಶುಗಳ ಸಂತಾನಹರಣ ಶಸ್ತ್ರ ಚಿಕಿತ್ಸೆಗೆ ಎಷ್ಟು ಶುಲ್ಕವನ್ನು ನಿಗದಿಪಡಿಸಲಾಗಿದೆ: ವಿವರ ನೀಡುವುದು.

ಇ) ಒಳರೋಗಿ ಚಿಕಿತ್ಸೆ ಶುಲ್ಕ ಮತ್ತು ಇತರೆ ಶುಲ್ಕಗಳನ್ನು ಕೊಡಲು ಕಷ್ಟವಾಗುವುದೆಂದು ಬಂದ ಸಾರ್ವಜನಿಕರು ಪ್ರತಿಭಟನೆ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಈ) ಸರಿಯಾಗಿ ಪಶುಚಿಕಿತ್ಸಾಲಯಗಳಿಗೆ ಔಷಧಿಗಳು ಸರಬರಾಜಿಲ್ಲದೆ ಸಾರ್ವಜನಿಕ ಪಶುಗಳಿಗೆ ತೊಂದರೆಯಾಗುತ್ತಿರುವುದು ನಿಜವೇ:

ಉ) ಈ ರೀತಿ ಶುಲ್ಕ ವಸೂಲು ಮಾಡುವುದನ್ನು ತಪ್ಪಿಸಲು ಸರ್ಕಾರವು ಏನಾದರೂ ಕಾರ್ಯಕ್ರಮ ತೆಗೆದುಕೊಳ್ಳುವುದೇ?

ಶ್ರೀ ಎಂ. ಮಹದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು)

ಅ) ನಿಗದಿಪಡಿಸಲಾಗಿದ್ದ ಸೇವಾ ಶುಲ್ಕವನ್ನು ಸರ್ಕಾರಿ ಆದೇಶ ಸಂಖ್ಯೆ: ಪಸಂಮೀ 57 ಪಪಾಯೋ 2003 ದಿನಾಂಕ: 21-7-2003ರಲ್ಲಿ ಹಿಂತೆಗೆದುಕೊಳ್ಳಲಾಗಿದೆ.

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ

ಈ) ಸರ್ಕಾರ ಲಭ್ಯವಿರುವ ವಂಟನಕ್ಕೆ ಒಳಪಟ್ಟು ಔಷಧಿಗಳನ್ನು ಸರಬರಾಜು ಮಾಡುತ್ತಿದೆ.

ಉ) ಮೇಲೆ ತಿಳಿಸಿರುವಂತೆ ಸೇವಾಶುಲ್ಕ ಹಿಂತೆಗೆದುಕೊಳ್ಳಲಾಗಿದೆ.

ಉಡುಪಿ ಜಿಲ್ಲೆಯಲ್ಲಿ ಮಂಜೂರಾದ ಪಾಲಿಕ್ಲಿನಿಕ್‌ಗಳು

4162 (4777) : ಶ್ರೀ ಗೋಪಾಲ ಬಂಡಾರಿ .ಹೆಚ್ (ಕಾರ್ಕಳ) ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?